ಶ್ರೀ ರಾಮಾನುಜವಿಜಯ ಸಂಚಿಕೆ—೧

ಮಣ್ಡಿ ಕ್ಷೇತ್ರದ ಪ್ರಭಾವ

ಗ್ರಂಥಕರ್ತರು ಮತ್ತು ಪ್ರಚಾರಕರು

ಮೇಲುಕೋಟೆ ಕುಮಾರ ಶಿಂಗರಾಚಾರ್ಯರು

MYSORE

PRINTED AT THE CORONATION PRESS,

1944

PRICE 2 ANNAS] [ಕ್ರಯ ೨ ಆಣೆ

ಶುಭಮಸ್ತು

ಶ್ರೀಮತೇ ರಾಮಾನುಜಾಯನಮಃ

ಮಂಡ್ಯಕ್ಷೇತ್ರದ ಪ್ರಭಾವ

ಈ ಮಂಡ್ಯವೆಂಬ ಮಹಾಕ್ಷೇತ್ರವು ಪೂರ್ವಕಾಲದಲ್ಲಿ ಮಾಂಡವ್ಯ ಮಹಾಋಷಿಗಳು ತಪಸ್ಸು ಮಾಡಿ ಸಿದ್ಧಿಯನ್ನು ಹೊಂದಿದಂಥ ಬಹಳ ಪವಿತ್ರವಾದ ಸ್ಥಳವಾಗಿತ್ತು. ಅಂತಹ ಈ ಪ್ರದೇಶವು ಹಿಂದಿನ ಕಾಲದಲ್ಲಿ ಆನೇಗೊಂದಿ ಸಂಸ್ಥಾನಕ್ಕೆ ಸೇರಿತ್ತು. ಇದು ಈಗ ಮೈಸೂರು ಶ್ರೀಮನ್ಮಹಾರಾಜರವರ ಘನ ಆಡಳಿತಕ್ಕೆ ಸೇರಿರುತ್ತೆ. ಇದು ಈಗ ಈ ಶೀಮೆಯ ಒಂಭತ್ತು ನವರತ್ನಗಳಾದಂಥ ಜಿಲ್ಲೆಗಳಲ್ಲಿ ಒಂದು ಜಿಲ್ಲೆ[1]ಯ ಮುಖ್ಯ ಪಟ್ಟಣವಾಗಿ ಶೋಭಿಸುತ್ತಲಿದೆ. ಈ ಕ್ಷೇತ್ರದ ಪೂರ್ವಚರಿತ್ರೆಯು ಈ ರೀತಿ ಇರುತ್ತೆ :—

ಶ್ರೀ ರಾಮಾನುಜಾಚಾರ್ಯರು ಶ್ರೀರಂಗದಲ್ಲಿ ನಮ್ಮಾಳ್ವಾರು ತಿರುವಾಯಿಮೊಳಿಯನ್ನು ಕಾಲಕ್ಷೇಪ ಹೇಳುತ್ತಿರುವಾಗ "[2] ಶಿಂದು ಪೂಮುಹಿಳುಂ ತಿರುವೇಂಗಡವರ್" ಎನ್ನುವ ಪದ್ಯಕ್ಕೆ ಅರ್ಥವನ್ನು ಹೇಳುತ್ತಿರುವ ಕಾಲದಲ್ಲಿ ತಮ್ಮ ಶಿಷ್ಯಗೋಷ್ಠಿಯನ್ನು ನೋಡಿ "ನಿಮ್ಮಲ್ಲಿ ಯಾರಾದರೂ ತಿರುಪತಿಗೆ ಹೋಗಿ ಶ್ರೀನಿವಾಸದೇವರಿಗೆ ಪುಷ್ಪತೋಟವನ್ನು ಮಾಡಿ ಪುಷ್ಪಕೈಂಕರ್ಯವನ್ನು ಮಾಡುವವರು ಇದಾರೆಯೇ ?" ಎಂದು ಕೇಳಲು, ಆಗೋಷ್ಠಿಯಲ್ಲಿ ಕಾಲಕ್ಷೇಪವನ್ನು ಕೇಳುತಿದ್ದ ಆಚಾರ್ಯರ ಶಿಷ್ಯರಾದ ಕಿರಂಗೂರು[3] ಅನಂದಾಳ್ವಾರ್ ಎಂಬುವರು ಎದ್ದುನಿಂತು ನಮಸ್ಕರಿಸಿ "ಅಪ್ಪಣೆಯಾದರೆ ನಾನು ಹೋಗಿಬರುತ್ತೇನೆ" ಎಂದು ಅಂಕೆಮಾಡಿಕೊಂಡರು. ಅದರಂತೆ ಆಚಾರ್ಯರು ಅವರಿಗೆ ತಿರುಪತಿಗೆ ಹೊರಡಲು ಅಪ್ಪಣೆಯನ್ನು

---

(1) ಜಿಲ್ಲೆ— ಡಿಸ್ಟ್ರಿಕ್ಟ್.

(2) ತಿರುವಾಯಿಮೊಳಿ.—3ನೇ ಶತಕ, 3ನೇ ದಶಕ, 2ನೇ ಪದ್ಯ.

(3) ಈ ಗ್ರಾಮವು ಶ್ರೀರಂಗಪಟ್ಟಣದ ಬಳಿ ಇದೆ.

ಕೊಟ್ಟರು. ಆಪ್ರಕಾರ ಅನಂದಾಳ್ವಾರು ತಮ್ಮ ಕುಟುಂಬಸಹಿತವಾಗಿ ಶ್ರೀರಂಗದಿಂದ ತಿರುಪತಿಗೆ ದಯಮಾಡಿದರು. ಅಲ್ಲಿ ಒಂದು ತೋಟವನ್ನು ನಿರ್ಮಿಸಿ ಒಂದು ಕೆರೆಯನ್ನು ಕಟ್ಟಿ ಅದಕ್ಕೆ **"ರಾಮಾನುಜ ನಂದವನಂ"** ಎಂದು ಹೆಸರಿಟ್ಟರು. ತಮ್ಮ ತೋಟದಲ್ಲಿ ಅನೇಕ ವಿಧವಾದ ಸುವಾಸನೆಯುಳ್ಳ ಪುಷ್ಪಗಿಡಗಳನ್ನು ಹಾಕಿ ದಿನವಹಿ ಶ್ರೀನಿವಾಸದೇವರಿಗೆ ಪುಷ್ಪವನ್ನು ಮಾಲೆಯಾಗಿಕಟ್ಟಿ ಅರ್ಪಿಸುತ್ತಾ ಇದ್ದರು. ಶ್ರೀರಾಮಾನುಜಾಚಾರ್ಯರು ಕೆಲವುಕಾಲವಾದನಂತರ ಶ್ರೀರಂಗದಿಂದ ಕಾಂಚೀಪುರದ ಮಾರ್ಗವಾಗಿ ತಿರುಪತಿಗೆ ದಯಮಾಡಿದಾಗ ಅಲ್ಲಿ ಅನಂದಾಳ್ವಾರು ದೇವರಿಗೆ ಮಾಡುತ್ತಿರುವ ಪುಷ್ಪಕೈಂಕರ್ಯಗಳನ್ನು ನೋಡಿ ಬಹಳವಾಗಿ ಸಂತೋಷಪಟ್ಟರು.

ಶ್ರೀರಾಮಾನುಜಾಚಾರ್ಯರು ಈ ಭಾರತಭೂಮಿಯನ್ನು ಪ್ರದಕ್ಷಿಣೆಯಾಗಿ ಯಾತ್ರೆಮಾಡುತ್ತಾ ಅಲ್ಲಲ್ಲೇ ಕುದೃಷ್ಟಿಮತವನ್ನು ತಮ್ಮ ವಿದ್ಯಾಗೌರವದಿಂದ ಖಂಡಿಸುತ್ತಾ ತಮ್ಮ ವಿಶಿಷ್ಟಾದ್ವೈತ ಮತವನ್ನು ಸ್ಥಾಪಿಸಿ ದೇವಸ್ಥಾನಗಳಲ್ಲಿ ಪೂಜೆ ಉತ್ಸವಾದಿಗಳನ್ನು ಪಾಂಚರಾತ್ರ ಆಗಮರೀತ್ಯ ಏರ್ಪಡಿಸಿ ಶಾ.ಶ 1009ನೇ (ಕ್ರಿ.ಶ. 1087) ಅಕ್ಷಯ ಸಂವತ್ಸರದಲ್ಲಿ ಶ್ರೀರಂಗಕ್ಕೆ ಹಿಂತಿರುಗಿದರು.

ಆಕಾಲದಲ್ಲಿ ಕೃಮಿಕಂಠ ಚೋಳರಾಜನು ಮಂತ್ರಿಗಳ ದುರ್ಬೋಧನೆಯಿಂದ ವಿಷ್ಣುದೇವಾಲಯಗಳನ್ನು ಒಡೆದು ನೆಲಸಮ ಮಾಡುತ್ತಾ ಎಲ್ಲರನ್ನು ಶೈವ ಮತಕ್ಕೆ ಸೇರುವಂತೆ ಬಲಾತ್ಕರಿಸುತ್ತಾ ಇದ್ದನು. ಆಗ ಆ ರಾಜನು ಚಿದಂಬರದಲ್ಲಿರುವ ತಿಲ್ಲೆ ಗೋವಿಂದರಾಜ ದೇವಸ್ಥಾನವನ್ನು ನಾಶಪಡಿಸುವ ಕಾಲದಲ್ಲಿ ಅಲ್ಲಿಯ ವಿಗ್ರಹಗಳನ್ನು ಭಕ್ತಾದಿಗಳು ರಾಜನಿಗೆ ಭಯಪಟ್ಟು ಎತ್ತಿಕೊಂಡು ತಿರುಪತಿಯಲ್ಲಿ ಬಚ್ಚಿಟ್ಟು ಕಾಪಾಡುತ್ತಿದ್ದರು. ಈ ವಿಚಾರವನ್ನು ರಾಮಾನುಜಾಚಾರ್ಯರು ಕೇಳಿ ಅಲ್ಲಿಗೆ (ತಿರುಪತಿಗೆ) ಜಾಗ್ರತೆಯಾಗಿ ದಯಮಾಡಿ **ಕಟ್ಟಿಯ ದೇವರಾಯನೆಂಬ** ಯಾದವರಾಜನ ಸಹಾಯವನ್ನು ಪಡೆದು ಬಂದು ದೇವಸ್ಥಾನವನ್ನು ಬೆಟ್ಟದ ಬುಡದಲ್ಲಿ ಕಟ್ಟಿಸಿ ಅದರಲ್ಲಿ ಚಿದಂಬರದಿಂದ ತಂದ ದೇವರುಗಳನ್ನು ಪ್ರತಿಷ್ಠೆಮಾಡಿ ಅದಕ್ಕೆ

"**ಗೋವಿಂದರಾಜಪಟ್ಟಣ**" ಎಂದು ಹೆಸರಿಟ್ಟರು. ಅಲ್ಲಿ ತಮ್ಮ ಶಿಷ್ಯರುಗಳಾದ ನಲ್ಲಾನ್, ಅನಂದಾಳ್ವಾನ್, ಈಚ್ಚಂಬಾಡಿ ಜೀಯರ್ ಮುಂತಾದವರನ್ನು ಅಲ್ಲೇ ನಿಲ್ಲುವಂತೆಮಾಡಿ ಅವರುಗಳಿಗೆ **ಇಳಮಂಡ್ಯ** ಎನ್ನುವ ಕ್ಷೇತ್ರವನ್ನು ಕಲ್ಪಿಸಿ ವಾಸಕ್ಕೆ ಮನೆಗಳನ್ನು ಕಟ್ಟಿಸಿ ಜೀವನೋಪಾಯಕ್ಕೂ ಮತ್ತು ದೇವರಪೂಜೆ ನಿವೇದನಕ್ಕೂ ಅನೇಕ ಭೂಮಿಗಳನ್ನು ದಾನವಾಗಿ ಕೊಡಿಸಿದರು. ಮತ್ತು ಅಲ್ಲಿ ೭೪ ಸಿಂಹಾಸನಾದಿಪತಿಗಳನ್ನು ಏರ್ಪಡಿಸಿ ಅವರುಗಳಿಗೆ ಶಂಖಚಕ್ರ ನರಸಿಂಹವಿಗ್ರಹ ಮುಂತಾದುವನ್ನು ಮನೆದೇವರಾಗಿ ಪೂಜಿಸುತ್ತಿರಲು ಕೊಟ್ಟು ಅಲ್ಲೇ ವಾಸಮಾಡಿಕೊಂಡು ದೇವರಸೇವೆಯನ್ನು ಮಾಡುತ್ತಾ ವಿಶಿಷ್ಟಾದ್ವೈತ ಸಿದ್ಧಾಂತವನ್ನು ವೃದ್ಧಿಮಾಡಿಕೊಂಡು [1] ಉಭಯವೇದಾಂತಗಳನ್ನು ಕಾಲಕ್ಷೇಪವನ್ನು ಮಾಡುತ್ತಾ ಬರುವಂತೆ ಏರ್ಪಾಡುಗಳನ್ನು ಮಾಡಿ ಶ್ರೀರಂಗಕ್ಕೆ ಹಿಂತಿರುಗಿದರು.

ಅನಂತರ ಇಳಮಂಡ್ಯದಲ್ಲಿ ವಾಸವಾಗಿದ್ದ ಅನಂದಾಳ್ವಾರ್ರ ವಂಶಸ್ಥರಾದ **ದೊಡ್ಡ ಗೋವಿಂದ ರಾಜ** ರೆಂಬುವರು ಪುರುಶೆ [2] ಎಂಬೂರಿನಲ್ಲಿ ಸ್ವಲ್ಪಕಾಲ ವಾಸವಾಗಿದ್ದು ಶ್ರೀಮಣವಾಳ ಮಾಮುನಿಗಳಲ್ಲಿ ಶಿಷ್ಯರಾಗಿ ಉಭಯವೇದಾಂತವನ್ನು ಅವರಲ್ಲಿ ಕಾಲಕ್ಷೇಪಮಾಡಿ ಅನಂತರ ತಿರುಪತಿಗೆ ದಯಮಾಡಿ ದೇವರಿಗೆ ಕೈಂಕರ್ಯಗಳನ್ನು ಮಾಡುತ್ತಿದ್ದರು.

"**ಅನಂತಾರ್ಯದಶಕ**" ವನ್ನು ರಚಿಸಿದ ಇವರಮಕ್ಕಳಾದ ಅಪ್ಪೈಯ್ಯಾಚಾರ್ಯ (ವರದಾಚಾರ್ಯ) ರಿಗೆ **ಕುಮಾರೋಭಯವೇದಾಂತಾಚಾರ್ಯ**ರೆಂದು ಹೆಸರಾಯಿತು. ಇವರ ಮಕ್ಕಳು **ತಿರುಮಲೈ ಗೋವಿಂದ ರಾಜವೊಡಯರು.** ಇವರು ಸಕಲ ವಿದ್ಯಾಪಾರಂಗತರಾಗಿ ತಿರುಪತಿಯಲ್ಲಿ ಶಿಷ್ಯರುಗಳಿಗೆ ಕಾಲಕ್ಷೇಪಾದಿಗಳನ್ನು ಹೇಳುತ್ತಿರುವ ಕಾಲದಲ್ಲಿ ಅನೆಗೊಂದಿ ಸಂಸ್ಥಾನದ **ಕೃಷ್ಣರಾಯನ** ರಾಜಸಭೆಯಲ್ಲಿ ಮತತ್ರಯ ಅಗ್ರತಾಂಬೂಲ ವಿಚಾರದಲ್ಲಿ ಬಹಳ ಚರ್ಚೆಯಾಗಿ ಆಸ್ಥಾನ ವಿದ್ವಾಂಸನಾದ **ಅರಾಧ್ಯನೆಂಬ** ಒಬ್ಬ ವೀರಶೈವನು "ಈ ಮರ್ಯಾದೆಯು ಬ್ರಹ್ಮ, ವಿಷ್ಣು,

(1) ಉಭಯವೇದಾಂತ---ಶಾಸ್ತ್ರಗಳು ಮತ್ತು ದ್ರಾವಿಡ ಪ್ರಬಂಧಗಳು.

(2) ಈ ಊರು ಕಾಂಚೀಪುರದ ಬಳಿ ಇರುತ್ತೆ.

ಮಹೇಶ್ವರರಿಗೆ ಸಲ್ಲತಕ್ಕದ್ದಾದ್ದರಿಂದ ಬ್ರಹ್ಮ ವಿಷ್ಣು ತಾಂಬೂಲವನ್ನು ಸ್ಮಾರ್ತ ಮಾಧ್ವರಿಗೆ ಕೊಟ್ಟು ಮಹೇಶ್ವರನ ತಾಂಬೂಲ ಮರ್ಯಾದೆಯನ್ನು ತನಗೆ ಕೊಡಬೇಕೆಂದೂ ಶ್ರೀವೈಷ್ಣವರಿಗೆ ಕೊಡಕೂಡದೆಂದೂ" ತನ್ನ ವಿದ್ಯಾ ಮದದಿಂದ ಘೋಷಿಸಿದನು. ಆದರೆ ರಾಜನು ಶ್ರೀವೈಷ್ಣವಮತಾವಲಂಬಿಯಾದ್ದರಿಂದ ಈ ವಿಚಾರವನ್ನು ಯೋಚಿಸಿ ಕ್ರಮಪಡಿಸಲು ಸ್ವಲ್ಪ ಕಾಲ ವಿಳಂಬವನ್ನು ಮಾಡಿ ಈ ವಿಚಾರವನ್ನು ತನ್ನ ದೇಶದಲ್ಲೆಲ್ಲಾ ಪ್ರಚಾರ ಮಾಡಿದನು. ಅಷ್ಟರಲ್ಲೇ ಆರಾಧ್ಯ ವಿದ್ವಾಂಸನು ತಾನೇ ಎಲ್ಲರಿಗಿಂತಲೂ ಮೇಲಾದವನೆಂದು ಶ್ರೀವೈಷ್ಣವ ವಿದ್ವಾಂಸರುಗಳನ್ನೆಲ್ಲಾ ತಿರಸ್ಕರಿಸುತ್ತಾ ವಿದ್ಯಾಪೀಠದಲ್ಲಿ ಕುಳಿತು ಮೆರೆಯುತ್ತಿದ್ದನು.

ಈ ವಿಚಾರವನ್ನು ತಿರುಪತಿಯಲ್ಲಿದ್ದ ಗೋವಿಂದರಾಜವೊಡೆಯರು ಕೇಳಿ ತಕ್ಷಣವೇ ಅಲ್ಲಿಂದ ಹೊರಟು ಆನೆಗೊಂದಿ ರಾಜಾಸ್ಥಾನದ ವಿದ್ಯಾಪೀಠವನ್ನು ಬಂದುಸೇರಿದರು. ಇವರು ದಯಮಾಡಿದ ವಿಚಾರವು ರಾಜನಿಗೆ ತಿಳಿದು ಇವರಲ್ಲಿ ಬಂದು ನಮಸ್ಕರಿಸಿ ಇವರಿಗೆ ಮರ್ಯಾದೆ ಮಾಡಿದನು. ಅನಂತರ ಒಂದು ದೊಡ್ಡ ವಿದ್ವತ್ಸಭೆಯನ್ನು ಸೇರಿಸಿ ಆರಾಧ್ಯ ವಿದ್ವಾಂಸನನ್ನು ಕರೆಕಳುಹಿಸಿದನು. ಆರಾಧ್ಯನಿಗೂ ಮತ್ತು ಗೋವಿಂದರಾಜರಿಗೂ ಎರಡು ದಿಗ್ಗಜಗಳಂತೆ ಎಂಟುದಿವಸಗಳು ವಾದಗಳಾಗಿ ಕೊನೆಯಲ್ಲಿ ಆರಾಧ್ಯನು ಸೋತುಹೋಗಿ ಗೋವಿಂದರಾಜವೊಡೆಯರಿಗೆ ಶಿಷ್ಯನಾದನು.

ಈ ವಿಜಯವನ್ನು ಕಂಡು ಕೃಷ್ಣರಾಯನು ಬಹಳಸಂತುಷ್ಟನಾಗಿ ಗೋವಿಂದರಾಜವೊಡೆಯರಿಗೆ ಕನಕಾಭಿಷೇಕವನ್ನು ಮಾಡಿ ತನ್ನ ಪಟ್ಟದ ಆನೆಯಮೇಲೆ ಅಂಬಾರಿಯಲ್ಲಿ ಕುಳ್ಳಿರಿಸಿ ತಾನು ಒಂದುಕಡೆಯಲ್ಲಿಯೂ ಆರಾಧ್ಯನು ಒಂದುಕಡೆಯಲ್ಲಿಯೂ ಚಾಮರವನ್ನು ಬೀಸುತ್ತಾ ರಾಜಬೀದಿಯಲ್ಲಿ ಅಧಿಕಸಂಭ್ರಮದಿಂದ ಮೆರವಣಿಗೆಯನ್ನು ಮಾಡಿಸಿ ವೈಜಯಂತಿ ಹಾರವನ್ನು ಹಾಕಿ ಆಕಾಲದ ಒಂದುಸಹಸ್ರ ವರಹ ನಾಣ್ಯಗಳಿಗೆ ಸಮಾನವಾಗಿ ವರುಷಂಪ್ರತಿ ಉತ್ಪತ್ತಿಯಾಗುವ ಗ್ರಾಮಗಳನ್ನು ತನ್ನ ಹೆಸರಿನಲ್ಲಿ ಇವರಿಗೆ ದಾನವಾಗಿಕೊಟ್ಟು ಸಂತುಷ್ಟನಾದನು. ಆಗಿನಿಂದ ತ್ರಿಮತಸ್ಥರಿಗೂ (ಸ್ಮಾರ್ತರು, ಶ್ರೀವೈಷ್ಣವರು, ಮತ್ತು ಮಾಧ್ವರು)

ಅಗ್ರತಾಂಬೂಲ ಮರ್ಯಾದೆಗಳು ನಡೆಯಲು ಪ್ರಾರಂಭವಾಯಿತು. ರಾಜನು ದಾನಮಾಡಿದ ಗ್ರಾಮಗಳಿಗೆ ರಾಜನಕೋರಿಕೆಯಂತೆ **ಕೃಷ್ಣರಾಯಪುರ** ಎಂದು ಹೆಸರಿಟ್ಟರು. ಹೀಗೆ ಕೆಲವು ಕಾಲವಾದನಂತರ ತಮ್ಮ ಪೂರ್ವೀಕರಾದ ಅನಂದಾಳ್ವಾರ್ರಿಗೆ ರಾಮಾನುಜಾಚಾರ್ಯರ ಕಾಲದಲ್ಲಿ ರಾಜರುಗಳು ದಾನವಾಗಿ ಕೊಟ್ಟ **ಮಂಡ್ಯ** ವೆಂಬ ಹೆಸರನ್ನು ಈ ಕೃಷ್ಣರಾಯಪುರಕ್ಕೆ ಇಟ್ಟರು. ಆಗಿನಿಂದ ಈ ಊರಿಗೆ **ಮಂಡ್ಯ** ಎಂದು ಹೆಸರುಂಟಾಯಿತು.

ಈ ಮಂಡ್ಯದಲ್ಲಿ ಗೋವಿಂದರಾಜವೊಡೆಯರು ದೇವಸ್ಥಾನ, ಅಗ್ರಹಾರ, ಮುಂತಾದವುಗಳನ್ನು ಕಟ್ಟಿಸಿ ದೇವಸ್ಥಾನದಲ್ಲಿ ಶ್ರೀ ಜನಾರ್ಧನ ಸ್ವಾಮಿಯನ್ನು ಪ್ರತಿಷ್ಠೆಮಾಡಿ ಬಂಧುಶಿಷ್ಯ ವರ್ಗದವರೊಂದಿಗೆ ಉಭಯವೇದಾಂತಗಳನ್ನು ಕಾಲಕ್ಷೇಪ ಮಾಡಿಕೊಂಡು ದೇವರಿಗೆ ನಿತ್ಯವೂ ಪೂಜೆ ಉತ್ಸವಾದಿಗಳನ್ನು ಆಯಾಕಾಲಕ್ಕೆ ಸರಿಯಾಗಿ ಮಾಡುತ್ತಾ ತಮ್ಮ ಪರಮಾಚಾರ್ಯರಾದ ಶ್ರೀರಾಮಾನುಜಾಚಾರ್ಯರಿಗೆ ಅವರ ಪರವಾಗಿ ಮೇಲುಕೋಟೆ ಶ್ರೀ ಯತಿರಾಜ ಮಠಕ್ಕೂ ಮತ್ತು ತಮ್ಮ ಕುಲದ (ವಂಶದ) ಮೂಲಪುರುಷರಾದ ಕಿರಂಗೂರು ಅನಂದಾಳ್ವಾರ್ರಿಗೂ ಅಗ್ರತೀರ್ಥ ಮುಂತಾದ ಮರ್ಯಾದೆಗಳನ್ನು ಮಾಡುತ್ತಾ ಬಹುಕಾಲವಿದ್ದರು. ಇವರ ತಂದೆಗಳಾದ ಅಪ್ಪೈಯ್ಯನವರ ವಂಶೀಕರಾದವರಿಗೆಲ್ಲಾ ಇವರ ಕಾಲದಲ್ಲಿ **" ಮಂಡಯುಂ ಅನಂದಾಂಪಿಳ್ಳೈಗಳು "** ಎಂದು ಹೆಸರುಂಟಾಯಿತು.

ಈ ಮಹಾಪುರುಷರು ಶಾ.ಶ. (1) 1439 ನೇಯ ಧಾತುವರ್ಷದಲ್ಲಿ ಈ ಮಂಡ್ಯದಗ್ರಾಮವನ್ನು ಪ್ರವೇಶಿಸಿ ಕೆಲವು ಕಾಲವಾದನಂತರ ತಮ್ಮ ದಾಯಾದಿಗಳಿಗೆ ಈ ಕೆಳಗೆ ಕಂಡಂತೆ ಭಾಗಮಾಡಿಕೊಟ್ಟರು :—

1. ತಮಗೆ (ಗೋವಿಂದರಾಜ ವೊಡೆಯರು)	23 ಭಾಗ ಕಲ್ಲಹಳ್ಳಿಗ್ರಾಮ
2. ಅವರ ತಮ್ಮನಾದ ತಿವೆಂಕ್ಕಟೈಯ್ಯಂಗಾರ್ರಿಗೆ	ಕೋಣನ 14 ಭಾಗ ಹಳ್ಳಿಗ್ರಾಮ

(1) ಕ್ರಿ.-ಶ 1517, ಕಲಿ-4618.

3. ತಮ್ಮ ಚಿಕ್ಕಮ್ಮನವರ ಮಕ್ಕಳಾದ ಹೊಟ್ಟಿಕುಮಾರ ತಿರುಮಲೈಯ್ಯಂಗಾರ್ಯರಿಗೆ	10	ಭಾಗ ದಡದಹಳ್ಳಿ ಗ್ರಾಮ
4. ಕುನ್ನಂಪಾಕಂ ಅಪ್ಪೈಯಾಚಾರ್ಯರಿಗೆ	1	7 ಭಾಗ ಹೊಸಹಳ್ಳಿ ಗ್ರಾಮ
5. ಮಣವಾಳರ ಮಕ್ಕಳಾದ ಪೆರಂಬೂದೂರು ಅಯ್ಯ್ಯ ಮತ್ತು ಕೋನಪ್ಪನವರುಗಳಿಗೆ	2	
6. ಷಣಾಯಕ ತಿಮ್ಮಣ್ಣಾರ್ಯರಿಗೆ	2	
7. ಶ್ಯಾನುಭೋಗರಿಗೆ	2	
ಒಟ್ಟು	54 ಭಾಗಗಳು.	

ಹೀಗೆ ಈ ಮುಂಡ್ಯದ ಗ್ರಾಮವನ್ನು 54 ಭಾಗಗಳನ್ನಾಗಿ ವಿಂಗಡಿಸಿ ಎಲ್ಲರಿಗೂ ಕ್ಷೇಮವನ್ನು ಕೋರುತ್ತಾ ಸುಖದಿಂದ ವಂಶ ಪಾರಂಪರ್ಯವಾಗಿ ಬಾಳುತ್ತಿದ್ದರು.

ಆ ಕಾಲದಲ್ಲಿ ಕುನ್ನಂಪಾಕಂ ಅಪ್ಪೈಯ್ಯಾಚಾರ್ಯರಿಗೆ **ಗೋವಿಂದ ರಾಜ**ನೆಂದು ಒಬ್ಬ ಮಗನು ಜನಿಸಿದನು. ಇವರ (ಗೋವಿಂದರಾಜರ) ಅಣ್ಣಂದೀರು ವರದಾಚಾರ್ಯರ ಮಕ್ಕಳಾದ **ಅಪ್ಪೈಯ್ಯಾಚಾರ್ಯರೆಂಬುವರು (ಶ್ರೀನಿವಾಸಾಚಾರ್ಯರು)** ಆನೆಗೊಂದಿ ಸಂಸ್ಥಾನದ ರಾಜನಾದ ಶಿವರಾಯನಲ್ಲಿ ತಮ್ಮ ವಿದ್ಯಾಪಾಂಡಿತ್ಯದ ಮಹಿಮೆಯಿಂದ ಆಕಾಲದ ಒಂದುನೂರು ವರಹ ನಾಣ್ಯ ವರುಷಂಪ್ರತಿ ಉತ್ಪತ್ತಿಯಾಗುವ ಮಾಚೇನಹಳ್ಳಿಯನ್ನು ಶಾ.ಶ. (1) 1481ನೆಯ ಕಾಳಯುಕ್ತಿ ಸಂವತ್ಸರದಲ್ಲಿ ಬಹುಮಾನವಾಗಿ ಪಡೆದರು. ಅದಕ್ಕೆ **ರಾಮಾನುಜಪುರಂ** ಎಂದು ಹೆಸರಿಟ್ಟರು. ಆ ಗ್ರಾಮದಲ್ಲಿ ಅಗ್ರಹಾರ ಮುಂತಾದ್ದನ್ನು ಕಟ್ಟಿಸಿ ಬಂಧುಶಿಷ್ಯವರ್ಗದವರೊಂದಿಗೆ ಉಭಯವೇದಾಂತವನ್ನು ಕಾಲಕ್ಷೇಪಮಾಡುತ್ತಾ ವಂಶಪಾರಂ

(1) ಕ್ರಿ.ಶ. 1559 ; ಕಲಿ-4660.

ಪರ್ಯವಾಗಿ ರಾಯನಿಗೆ ಶ್ರೀಯಃಪ್ರಾರ್ಥನೆಯನ್ನು ಮಾಡುತ್ತಾ ಸುಖದಿಂದ ವಾಸಮಾಡಿಕ್ಕೊಂಡಿದ್ದರು. ಇವರ ಕಾಲದಲ್ಲಿ ಇವರ ವಂಶದವರಿಗೆಲ್ಲಾ **ರಾಮಾನುಜಪುರಂ ಅನಂದಾಂಪಿಳ್ಳೈಗಳೆಂದು** ಹೆಸರುಂಟಾಯಿತು. ಆ ಕಾಲದಲ್ಲಿ **ಮುಂಡಯಂ ಅನಂದಾಂಪಿಳ್ಳೈಗಳಿಗೂ** (M.A.) ಮತ್ತು **ರಾಮಾನುಜಪುರಂ ಅನಂದಾಂಪಿಳ್ಳೈಗಳಿಗೂ** (R.A.) ತ್ರಿರಾತ್ರಾದ್ಯಾಶೌಚವೂ ಶಿಷ್ಯಾಚಾರ್ಯಕ್ರಮವೂ, ಬಂಧುತ್ವವೂ ಇರಲಿಲ್ಲ. ಆದರೆ ಇತ್ತೀಚೆಗೆ ಎಲ್ಲಾ ಕಲೆತು ಬರುತ್ತಲಿದೆ.

ಆ ಕಾಲದಿಂದ ಅಂದರೆ ಕ್ರಿ.ಶ. 15 ನೇ ಶತಮಾನದಿಂದ ಈ ಮಹಾ ಕ್ಷೇತ್ರವು ಶ್ರೀ ವೈಷ್ಣವ ಬ್ರಾಹ್ಮಣರುಗಳಿಂದಲೂ ಅನೇಕ ವಿದ್ವಾಂಸರು ಗಳಿಂದಲೂ ಮತ್ತು ಮಹನೀಯರುಗಳಿಂದಲೂ ವಾಸಮಾಡಲ್ಪಟ್ಟು ಶ್ರೀ ಜನಾರ್ದನಸ್ವಾಮಿಗಳ ಪ್ರೀತಿಗೆ ಪಾತ್ರವಾಗಿ ನಮ್ಮನ್ನಾಳುವ ಶ್ರೀಮನ್ಮ ಹಾರಾಜ ಸಾರ್ವಭೌಮರ ಕಾಲದಲ್ಲಿ ಮಹತ್ತರವಾದ ಅಭಿವೃದ್ಧಿಯನ್ನು ಹೊಂದುತ್ತಲಿದೆ.

ಓಂ ಶಾಂತಿಃ

[ಈ ಸಂಚಿಕೆಯಲ್ಲಿ ಕಂಡ ವಿಷಯಗಳಲ್ಲಿ ಏನಾದರೂ ತಪ್ಪುಗಳಿದ್ದರೂ ಅಥವಾ ಹೆಚ್ಚು ವಿಷಯಗಳು ತಿಳಿದಿದ್ದರೂ ಅವುಗಳನ್ನು ಮಹನೀಯರು ದಾಸನಿಗೆ ತಿಳಿಯಪಡಿಸಿದಲ್ಲಿ ಅದನ್ನು ಶಿರಸಾವಹಿಸಿ ಮುಂದಿನ ಮುದ್ರಣದಲ್ಲಿ ಕ್ರಮಪಡಿಸಿ ಪ್ರಕಟಿಸಲಾಗುತ್ತಿ—Compiler.]

ಶ್ರೀರಾಮಾನುಜವಿಜಯ—ಗ್ರಂಥಕರ್ತರಿಂದ ಪ್ರಚುರವಾಗುವುದರಲ್ಲಿರುವ ಕನ್ನಡ ಪುಸ್ತಕಗಳು.

ಸಂಚಿಕೆ ೨ **ಶ್ರೀವೈಷವ ಚಿಂತಾಮಣಿಮಾಲೆ**—ಇದರಲ್ಲಿ ಎಲ್ಲಾ ಆಳ್ವಾರು ಆಚಾರ್ಯರುಗಳ ಪ್ರಭಾವವನ್ನು ಸಹ ಚೆನ್ನಾಗಿ ಹೆಂಗಸರು ಆದಿಯಾಗಿ ಎಲ್ಲರೂ ಓದಿ ಉಜ್ಜೀವಿಸುವಂತೆ ಸುಲಲಿತವಾಗಿ ಬರೆಯಲ್ಪಟ್ಟಿರುತ್ತೆ.

ಸಂಚಿಕೆ ೩ **ಪಂಚಸ್ವರೂಪ** (ಅರ್ಥಪಂಚಕವಿಚಾರ) ಮತ್ತು ಇತರ ವಿಚಾರಗಳು.

ಸಂಚಿಕೆ ೪ **ಆಚಾರ್ಯಪ್ರಭಾವ ಸಂಗ್ರಹ**—ಇದರಲ್ಲಿ ನಾಥಮುನಿಗಳು ಆದಿಯಾಗಿ 82 ಪೂರ್ವಾಚಾರ್ಯರುಗಳ ಪ್ರಭಾವವು ಬರೆಯಲ್ಪಟ್ಟಿರುತ್ತೆ.

ಸಂಚಿಕೆ ೫ **ವರ್ಗದ್ವಯ ಪಿತೃತರ್ಪಣ** ಮತ್ತು **ಗೃಹಾರಾಧನಕ್ರಮ**

ಸಂಚಿಕೆ ೬ **ನಿತ್ಯವಿಧಿ**—ಯಜುರ್ವೇದ ಸಂಧ್ಯಾವಂದನಕ್ರಮ, ನೂತನ ಯಜ್ಞೋಪವೀತಧಾರಣೆ, ಉಪಾಕರ್ಮ ಮಂತ್ರಗಳು. ಮುಂತಾದವು ಇದರಲ್ಲಿ ಅಡಗಿವೆ.

ಮೇಲ್ಕಂಡ ಸಂಚಿಕೆಗಳನ್ನು ಪ್ರಚುರಮಾಡಲು ಅಭಿಮಾನಿಗಳು ಪ್ರೋತ್ಸಾಹಿಸಿ ಯಥಾಶಕ್ತಿ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

Apply for copies :—

M. K. SINGARACHAR,
Editor, Sri Ramanuja Vijaya Series
48, Temple Street,
P.O. Mandya, (*Mysore State*).